ಜಾದೂಗಾರನ ಮಾಯಾದಂಡಕ್ಕೆ ಮಣಿಯುವ ಪುಟ್ಟ ಪಕ್ಷಿಯಂತೆ ಕಾರ್ಯನಿರ್ವಹಿಸುವ ‘ತೇಜಸ್’ ವಿಮಾನಗಳು ಸ್ವದೇಶಿ ವಿಮಾನಗಳ ಪರಂಪರೆಯಲ್ಲಿ ಒಂದು ‘ಬಾನಗಲ್ಲು’. ಎಚ್.ಎ.ಎಲ್. ವಿಮಾನ ಕಾರ್ಖಾನೆಯ ಹೆಮ್ಮೆಯ ಉತ್ಪಾದನೆಯಾದ ‘ತೇಜಸ್’ ಭಾರತೀಯ ವಾಯುಪಡೆಯ ವರ್ಚಸ್ಸನ್ನು ಹೆಚ್ಚಿಸಿರುವ ಯುದ್ಧಹಕ್ಕಿ.

■ ಸುಕ್ಷೇರಸಾಗರ




# ತೇಜಸ್ ವಿಮಾನ ಸ್ವದೇಶಿ ಸುಮ್ಮಾನ!



ದೇಶದ ಮಾನವನ್ನು ಆಗಸಕ್ಕೇರಿಸಿದ ಖ್ಯಾತಿ ‘ತೇಜಸ್’ ವಿಮಾನದ್ದು. 4954 ಬಾರಿ ಕಳಂಕರಹಿತ ಹಾರಾಟ ನಡೆಸಿರುವ ‘ತೇಜಸ್’ ವಿಮಾನದ ಖರೀದಿಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ವಿನ್ಯಾಸಗಾರರ ‘ತವರು ಮನೆಯಿಂದ’ ಬಳಕೆದಾರರ ‘ಬೀಗರ ಮನೆಗೆ’ ಬಿಡದಿಯನ್ನು ಬದಲಿಸುತ್ತಿದೆ. ಭಾರತದ ಬಾನಂಗಳದಲ್ಲಿ ತನ್ನ ಸಮಾನರಾರಿಹರು ಎಂದು ಬೀಗುವ ಮೂಲಕ ಸ್ವದೇಶಿ ವಿಮಾನಗಳ ಸುಮ್ಮಾನಕ್ಕೆ ನಾಂದಿ ಹಾಡಿದೆ.

ಯುದ್ಧ ವಿಮಾನದ ಕಾರ್ಯಾಚರಣೆ ನಿಮಗೆ ಗೊತ್ತು. ಕ್ಷಿಪ್ರ ವೇಗದಲ್ಲಿ ಆಗಸಕ್ಕೇರಿ, ಶತ್ರು ದೇಶದ ರೇಡಾರ್‌ಗಳ ಕಣ್ತಪ್ಪಿಸಿ, ತಾನು ಹೊತ್ತೊಯ್ದ ಕ್ಷಿಪಣಿ–ಬಾಂಬುಗಳನ್ನು ನಿರ್ದಿಷ್ಟ ಗುರಿಗೆ ತಲುಪಿಸಿ ಸುರಕ್ಷವಾಗಿ ಹಿಂದಿರುಗಬೇಕು. ಹಾಗೆಯೇ ಸೆಣಸಾಟಕ್ಕೆಂದು ಶತ್ರು ವಿಮಾನ ಆಗಸದಲ್ಲಿಯೇ ಸವಾಲೊಡ್ಡಿದರೆ, ಭೀಕರ ಸರ್ಪಕಾಳಗಕ್ಕೂ ಸಿದ್ಧವಾಗಿರಬೇಕು. ಸುಂಯ್ಯೆಂದು ಮೇಲೇರುವ, ಅಷ್ಟೇ ವೇಗದಿಂದ ಕೆಳಗಿಳಿಯುವ, ತಲೆಕೆಳಕಾಗಿ ಮುನ್ನುಗ್ಗುವ, ಎಲ್ಲೆಂದರಲ್ಲಿ, ಎತ್ತೆಂದರತ್ತ ತಿರುತಿರುಗಿ ಸುಳಿದಾಡಿ ಸೆಳೆಯುವ ಸಾಮರ್ಥ್ಯ ಯುದ್ಧ ವಿಮಾನಗಳಿಗಿರಬೇಕು. ಅಕ್ಷರಶಃ ಜಾದೂಗಾರನ ಮಾಯಾದಂಡಕ್ಕೆ ಮಣಿಯುವ ಪುಟ್ಟ ಪಕ್ಷಿಯಂತೆ ಅವು ಕಾರ್ಯನಿರ್ವಹಿಸಬೇಕು.

ಅಂಥದೊಂದು ಸ್ವದೇಶಿ ನಿರ್ಮಿತ ಯುದ್ಧ ವಿಮಾನದ ತಂತ್ರಜ್ಞಾನ ಪ್ರಾತ್ಯಕ್ಷಿಕೆಯು ಜನವರಿ 4, 2001ರಂದು ಆಗಸಕ್ಕೇರಿತು. ಅದುವೇ ಭಾರತದ ಹೆಮ್ಮೆಯ ‘ಹಗುರ ಯುದ್ಧ ವಿಮಾನ’ (Light Combat Aircraft, LCA). ಮುಂದೆ ಅದೇ ವರ್ಷದ ಫೆಬ್ರುವರಿ 9ರಂದು ‘ಏರೋ ಇಂಡಿಯಾ 2001’ ವಿಮಾನ ಪ್ರದರ್ಶನದಲ್ಲಿ ಅದು ಹಾರಾಟ ನಡೆಸಿತು. ವೈಮಾನಿಕ ಜಗತ್ತಿನಲ್ಲಿ ಒಂದು ಹೊಸ ದಾಖಲೆಯನ್ನದು ಸ್ಥಾಪಿಸಿತು. ಜಗತ್ತಿನ ಯಾವುದೇ ಯುದ್ಧ ವಿಮಾನ ತನ್ನ ನಾಲ್ಕನೆಯ ಪ್ರಾಯೋಗಿಕ ಹಾರಾಟವನ್ನು ಸಾರ್ವಜನಿಕರೆದುರು ಪ್ರದರ್ಶಿಸಿದ ಉದಾಹರಣೆಯಿಲ್ಲ. (‘ಮಾನ’ ಉಳಿಸಿದ ವಿಮಾನ!, ‘ಸುಧಾ’ 22 ಫೆಬ್ರುವರಿ 2001)

ವಿಮಾನ ನಿರ್ಮಾಣ ಸುಲಭದ ಕಾರ್ಯವಲ್ಲ. ಅದರಲ್ಲೂ ಯುದ್ಧ ವಿಮಾನಗಳನ್ನು ನಿರ್ಮಿಸುವುದು ಜಗತ್ತಿನ ಬೆರಳೆಣಿಕೆಯ ದೇಶಗಳಷ್ಟೇ. ಎಚ್.ಎ.ಎಲ್. ವಿಮಾನ ಕಾರ್ಖಾನೆಯು ಸಹಸ್ರಾರು ಸಂಖ್ಯೆಯ ವಿಮಾನಗಳು ಹಾಗೂ ಹೆಲಿಕಾಪ್ಟರ್‌ಗಳನ್ನು ಈಗಾಗಲೇ ನಿರ್ಮಿಸಿದೆ. ಇವುಗಳಲ್ಲಿ ಬಹುತೇಕ ವಿಮಾನ/ಹೆಲಿಕಾಪ್ಟರ್‌ಗಳು ಯುದ್ಧ ಸಂಬಂಧಿಗಳೇ.

ವಿನ್ಯಾಸದ ದೃಷ್ಟಿಯಲ್ಲಿ ‘ತೇಜಸ್’ ಅಗ್ರಗಣ್ಯ

